# ವಂದಿತಾ ಸಿನಿಮಾ ಪಥ

‘ನಮೋ ಭೂತಾತ್ಮ 2’, ‘ಕೆಡಿ’ ಸಿನಿಮಾಗಳಲ್ಲಿ ನಟಿಸಿರುವ ವಂದಿತಾ, ಇದೀಗ ‘ಲಕ್ಷ್ಮೀಪುತ್ರ’ ಸಿನಿಮಾದಲ್ಲಿ ನಟ ಚಿಕ್ಕಣ್ಣ ಅವರಿಗೆ ನಾಯಕಿಯಾಗಿ ಪರಿಚಿತರಾಗುತ್ತಿದ್ದಾರೆ. ಹೊಸ ಹೆಸರಿನೊಂದಿಗೆ ಸಿನಿಮಾರಂಗದಲ್ಲಿ ತಮ್ಮದೇ ಹೊಸ ಹಾದಿ ರೂಪಿಸಿಕೊಳ್ಳಲು ಸಜ್ಜಾಗಿದ್ದಾರೆ.

■ ಎಸ್ಸೆನ್



◆ **ಮೋನಿಕಾ ಗೌಡ ಆಗಿದ್ದ ನೀವು ವಂದಿತಾ ಆಗಿ ಹೆಸರು ಬದಲಿಸಿಕೊಂಡ ಕಾರಣ?**

ನನ್ನ ಮುಂದಿನ ಸಿನಿಮಾ ಪಯಣದ ದೃಷ್ಟಿಯಿಂದ ಹೆಸರು ಬದಲಾಯಿಸಿಕೊಂಡೆ. ವಂದಿತಾ ಎಂಬ ಹೆಸರನ್ನು ನಿರ್ದೇಶಕ ಎ.ಪಿ. ಅರ್ಜುನ್ ಸರ್ ಅವರು ಸೂಚಿಸಿದ್ದು. ಈ ಹೆಸರಿನ ಮೂಲಕ ನಾಯಕಿಯಾಗಿ ಪರಿಚಿತಗೊಳ್ಳಲಿ ಎಂದು ಹೆಸರು ಬದಲಿಸಲು ಸಲಹೆ ನೀಡಿದರು.

◆ **ಸಿನಿಮಾರಂಗಕ್ಕೆ ನೀವು ಬಂದ ಹಿನ್ನೆಲೆ?**

ನಾನು ಹುಟ್ಟಿ ಬೆಳೆದಿದ್ದು ಮೈಸೂರಿನಲ್ಲಿ. ಎಂಜಿನಿಯರಿಂಗ್ ಮುಗಿಸಿ ಎರಡು ವರ್ಷ ಐಟಿ ಕ್ಷೇತ್ರದಲ್ಲಿ ಕೆಲಸ ಮಾಡಿದೆ. ಕಾಲೇಜಿನಲ್ಲಿ ಓದುತ್ತಿದ್ದಾಗ ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೆ. ಆಗ ಮೋಹನ್ ಮಾಸ್ಟರ್ ಎಂಬುವರಿಂದ ಅವಕಾಶ ಬಂದಿತ್ತು. ಓದುತ್ತಿದ್ದ ಕಾರಣ ನಟನೆಗೆ ಬರುವ ಬಗ್ಗೆ ಆಲೋಚನೆ, ಧೈರ್ಯ ಇರಲಿಲ್ಲ. ಶಾಲಾ ಕಾಲೇಜಿನಲ್ಲಿ ಬಹಳ ಚುರುಕಾಗಿದ್ದೆ. ನೃತ್ಯ, ಸಂಗೀತ, ಕ್ರೀಡೆಯಲ್ಲಿ ಚಟುವಟಿಕೆಯಿಂದ ತೊಡಗಿಸಿಕೊಂಡಿದ್ದೆ. ಆಲ್‌ರೌಂಡರ್ ಹುಡುಗಿಯಂತೆ ಇದ್ದೆ. ಕೆಲಸಕ್ಕೆ ಸೇರಿದ ನಂತರದಲ್ಲಿ, ಒಂದು ಪ್ರಯತ್ನ ಮಾಡುವ ಎಂದು ‘ನಮೋ ಭೂತಾತ್ಮ 2’ ಸಿನಿಮಾದ ಆಡಿಷನ್‌ನಲ್ಲಿ ಭಾಗವಹಿಸಿದ್ದೆ. ಅವಕಾಶ ದೊರೆತು, ಅಲ್ಲಿಂದ ಸಿನಿಮಾರಂಗದಲ್ಲಿ ನನ್ನ ಪಯಣ ಆರಂಭವಾಯಿತು.

◆ **‘ಲಕ್ಷ್ಮೀಪುತ್ರ’ದಲ್ಲಿ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿರುವ ಅನುಭವ ಹೇಗಿದೆ?**

‘ಲಕ್ಷ್ಮೀಪುತ್ರ’ದ ಮೂಲಕ ನಾಯಕಿಯಾಗಿ ಲಾಂಚ್ ಆಗಿದ್ದೇನೆ. ತುಂಬಾ ಉತ್ಸುಕತೆ ಇದೆ. ಚಿಕ್ಕಣ್ಣ ಅವರ ಜೊತೆಗೆ ನಟಿಸುತ್ತಿರುವುದು, ಎ.ಪಿ. ಅರ್ಜುನ್ ಅವರ ಪ್ರೊಡಕ್ಷನ್‌ನಿಂದ ಪರಿಚಿತಗೊಳ್ಳುತ್ತಿರುವುದು ಒಂದು ಬಗೆಯ ಉತ್ಸಾಹ ತಂದಿದೆ. ಮುಖ್ಯ ಪಾತ್ರದಲ್ಲಿ ಅಭಿನಯಿಸುತ್ತಿರುವುದು ಹೊಸ ಅನುಭವ. ಆದರೆ ಈ ಹಿಂದಿನ ಎರಡು ಸಿನಿಮಾಗಳಲ್ಲಿ ಒಳ್ಳೆಯ ಚಿತ್ರತಂಡಗಳ ಜೊತೆ ಕೆಲಸ ಮಾಡಿರುವುದರಿಂದ ನಟನೆಯಲ್ಲಿ ಆತ್ಮವಿಶ್ವಾಸವಿದೆ.

ಈಚೆಗೆ ರಿಲೀಸ್ ಮಾಡಿರುವ ವಿಡಿಯೊದಲ್ಲಿರುವ ಪಾತ್ರಕ್ಕೂ, ಸಿನಿಮಾದೊಳಗಿನ ಪಾತ್ರಕ್ಕೂ ಸಂಬಂಧವಿಲ್ಲ. ಅದು ಕೇವಲ ಪರಿಚಯಾತ್ಮಕ ವಿಡಿಯೊ. ಪಾತ್ರದ ಬಗ್ಗೆ ಹೆಚ್ಚು ರಿವೀಲ್ ಮಾಡುವ ಹಾಗಿಲ್ಲ.

◆ **ವೈಯಕ್ತಿಕವಾಗಿ ನಿಮ್ಮನ್ನು ಸೆಳೆಯುವ ಪಾತ್ರ, ಸಿನಿಮಾ ಪ್ರಕಾರಗಳು?**

ನನಗೆ ಕಮರ್ಷಿಯಲ್ ಸಿನಿಮಾಗಳನ್ನು, ಐತಿಹಾಸಿಕ ಸಿನಿಮಾಗಳನ್ನು ಮಾಡುವ ಹಂಬಲವಿದೆ. ನಾಯಕಿಯಾಗಿ ಈಗ ಪರಿಚಿತಗೊಳ್ಳುತ್ತಿದ್ದೇನೆ. ಇಂಥದ್ದೇ ಪಾತ್ರ ಎಂಬ ನಿರೀಕ್ಷೆಯಿಲ್ಲ. ಒಳ್ಳೆಯ ಪ್ರೊಡಕ್ಷನ್‌ನಲ್ಲಿ, ಒಳ್ಳೆಯ ಪಾತ್ರಗಳನ್ನು ಮಾಡಲು ಸಿದ್ಧ. ಕಲಾವಿದೆ ಆಗಿ ಇಂಥದ್ದೇ ಎಂದು ನಿರ್ದಿಷ್ಟ ಮಿತಿ ಇಟ್ಟುಕೊಳ್ಳುವುದಿಲ್ಲ. ನನ್ನ ಕೌಶಲವನ್ನು ಎಕ್ಸ್‌ಪ್ಲೋರ್ ಮಾಡಲು ಅನುವಾಗುವಂಥ ಅವಕಾಶ ಸಿಗಬೇಕಷ್ಟೆ.

ನಟನೆಯ ತರಬೇತಿ ಪಡೆದುಕೊಂಡಿಲ್ಲ. ರಂಗಭೂಮಿ ಹಿನ್ನೆಲೆಯಿಲ್ಲ. ಹೊಸತನ್ನು ಕಲಿಯುವಂಥ, ಸವಾಲಿನ ಪಾತ್ರಗಳನ್ನು ಮಾಡುವ ಆಲೋಚನೆಯಿದೆ.

◆ **ನಿಮ್ಮ ಮುಂದಿನ ನಡೆ?**

ಧ್ರುವ ಸರ್ಜಾ ಅವರ ನಟನೆಯ ‘ಕೆಡಿ’ ಸಿನಿಮಾದಲ್ಲಿ ನಟಿಸಿದ್ದು, ಇದೇ ಏಪ್ರಿಲ್ 30ಕ್ಕೆ ಬಿಡುಗಡೆಯಾಗುತ್ತಿದೆ. ಈ ಪ್ಯಾನ್ ಇಂಡಿಯಾ ಸಿನಿಮಾ ಮೇಲೆ ಬಹಳ ನಿರೀಕ್ಷೆಯಿದೆ. ‘ಲಕ್ಷ್ಮೀಪುತ್ರ’ ಸಿನಿಮಾ ಮೂಲಕ ನಾಯಕಿಯಾಗಿ ಪರಿಚಿತಗೊಳ್ಳುತ್ತಿದ್ದೇನೆ. ಸದ್ಯ ಹೊಸ ಕಥೆಗಳನ್ನು ಕೇಳುತ್ತಿದ್ದೇನೆ. ಚರ್ಚೆಗಳು ನಡೆಯುತ್ತಿವೆ. ಉತ್ತಮ ಅವಕಾಶವನ್ನು ಎದುರು ನೋಡುತ್ತಿದ್ದೇನೆ. ■